ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1677/2024

| | | | |
|---|---|---|---|
| ಹೆಸರು | : | ಮಹೇಶ್ ಮೇರಾ | ಸಿ .ಡಬ್ಲ್ಯೂ :14 |
| ತಂದೆ ಹೆಸರು | : | ಖಿಮ್ಜಿ | ಪಿ .ಡಬ್ಲ್ಯೂ :12 |
| ವಯಸ್ಸು | : | 39 ವರ್ಷ | |
| ಉದ್ಯೋಗ | : | ಮ್ಯಾನೇಜರ್ ಇಕೋ ಆಫೀಸ್ ಸೆಲ್ಯೂಷನ್ಸ್, ಬೆಂಗಳೂರು | |
| ವಾಸಸ್ಥಳ | : | ಬೆಂಗಳೂರು | |

ಸಾಕ್ಷಿಯನ್ನು ದಿಃ15-07-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 29-06-2024 ರಂದು ನಮ್ಮ ಅಂಗಡಿಯಾದ ಇಕೋ ಆಫೀಸ್ ಸೆಲ್ಯೂಷನ್ಸ್ ಗೆ ಪೊಲೀಸರು ಆರೋಪಿತರೊಡನೆ ಬಂದಿದ್ದರು . ಆರೋಪಿತರು ಆ ದಿನ ಮಾಸ್ಕ ಧರಿಸಿದ್ದರು . ಮಾಸ್ಕ ನ್ನು ತೆಗೆಯಲಾಗಿ ಅವರು ಆಕಾಶ್ ಸುಭಾಷ್ ಎಂದು ಈ ಹಿಂದೆ ಅಂಗಡಿಗೆ ಬಂದಿದ್ದರು ಎಂದು ನಾನು ಗುರುತಿಸಿದೆ . ಅವರು ಹಿಂದೆ ಅಂಗಡಿಗೆ ಪ್ರಿಂಟರ್ ತಂದುಕೊಟ್ಟಿದ್ದರು . ಮೇಲೆ ಹೇಳಿದ ದಿನಾಂಕದಂದು ಪೊಲೀಸರು ಬೆಳಗ್ಗೆ 8.30 ರಿಂದ 9.15 ರವರೆಗೆ ನಮ್ಮ ಅಂಗಡಿಯಲ್ಲಿ ಮಹಜರು ಕ್ರಮ ಜರುಗಿಸಿದ್ದಾರೆ ಮತ್ತು 15 ಪ್ರಿಂಟರ್ ಗಳನ್ನು ವಶಪಡಿಸಿಕೊಂಡಿದ್ದಾರೆ . ತಿಂಗಳಲ್ಲಿ ಒಂದು ಅಥವಾ ಎರಡು ದಿನದಂತೆ 6 ತಿಂಗಳವರೆಗೆ ಆರೋಪಿತರು ನಮ್ಮ ಅಂಗಡಿಗೆ ಪ್ರಿಂಟರ್ ಗಳನ್ನು ಮಾರಾಟ ಮಾಡಿದ್ದರು . ಮೇಲೆ ಹೇಳಿದ ದಿನಾಂಕದಂದು ಪೊಲೀಸರೊಡನೆ ಚಾಸಾ -12 ಮತ್ತು 13 ರವರು ಬಂದಿದ್ದರು .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನಮ್ಮ ಶಾಪ್ ನಲ್ಲಿ ಪ್ರಿಂಟರ್ ಗಳನ್ನು ಕೇವಲ ಸರ್ವೀಸ್ ಮಾತ್ರ ಮಾಡುತ್ತೇವೆ . ಆರೋಪಿತರು ಪ್ರಿಂಟರ್ ಗಳನ್ನು ಮಾರಾಟ ಮಾಡುವ ಸಲುವಾಗಿ ತಂದಿದ್ದರು . ನಮ್ಮ ಶಾಪ್ ನ್ನು ಪ್ರಿಂಟರ್ ಗಳನ್ನು ಮಾರಾಟ ಮಾಡುವುದಿಲ್ಲ . ಸರ್ವೀಸ್ ಗಾಗಿ ನಿಮ್ಮ ಶಾಪ್ ನಲ್ಲಿ ಎಷ್ಟು ಪ್ರಿಂಟರ್ ಗಳನ್ನು ಇಟ್ಟಿದ್ದೀರಿ ಎಂದರೆ ಸಾಕ್ಷಿಯು ಪ್ರಿಂಟರ್ ಗಳನ್ನು ಸರ್ವೀಸ್ ಗೆಂದು ತಂದುಕೊಟ್ಟಾಗ ಒಂದು ಅಥವಾ ಎರಡು ದಿನದಲ್ಲಿ ಸರ್ವೀಸ್ ಮಾಡಿ ಹಿಂತಿರುಗಿಸುತ್ತೇವೆ ಹೆಚ್ಚು ದಿನ ಇಡುವುದಿಲ್ಲ ಎಂದು ತಿಳಿಸಿದ್ದಾರೆ . ನಮ್ಮ ಶಾಪ್ ನಲ್ಲಿ ಹೆಚ್ಚು ಪ್ರಿಂಟರ್ ಗಳನ್ನು ಇಟ್ಟುಕೊಳ್ಳುವುದಿಲ್ಲ . ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಹೇಳುವ 15 ಪ್ರಿಂಟರ್ ಗಳನ್ನು ಆರೋಪಿತರೇ ನಮ್ಮ ಶಾಪ್ ಗೆ

ತಂದುಕೊಟ್ಟಿದ್ದರು ಎಂದು ಗುರುತಿಸಲು ಯಾವುದೇ ನಿಶಾನೆಗಳು ಇರುವುದಿಲ್ಲ . ಆರೋಪಿತರು ನಮ್ಮ ಶಾಪ್ ಗೆ ಎಂದು ಸಹಾ ಬಂದಿಲ್ಲ ಮತ್ತು ಯಾವುದೇ ಪ್ರಿಂಟರ್ ಗಳನ್ನು ಮಾರಾಟ ಮಾಡಿಲ್ಲ , ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.